ತಾರೀಖು 7ನೇ ಜುಲೈ 1885.

ತಿದ್ದುಪಾಟು.

ನಂ. 70.—ಸ್ಯ 1885ನೇ ಇಸವಿ ಜೂ್ 24ನೇ ಮಕ್ತುಂ 66ನೇ ನಂಬರುಳ್ಳ ಈ ಆಫೀಸು ಇಸ್ತಿಹಾರ್ ನಾಮೆಯು ಅವಿಭಾಗ ವಲ್ಲಿ ನಮೂದಾದ "15 ದಿವಸಗಳ" ಎಂಬ ಮಾತುಗಳಿಗೆ ಬದಲಾಗಿ "2 ತಿಂಗಳ" ಎಂದು ಓದಿ ಕೊಳ್ಳತಕ್ಕದ್ದು.

ಬಮೋಜೀಬ್ ಹುಕ್ಕುಂ,
ವಿ. ಪಿ. ಮಾಧವರಾವ್,
ಆ|| ಸೆಕ್ರಟೇರಿ.

ಪೊಲೀಸ್ ಇಲಾಖಾ.

ಇಸ್ತಿಹಾರ್‌ನಾಮೆ.

ನಂ. 332—42. ತಾರೀಖು 8ನೇ ಜುಲೈ 1885.

ಸ್ಯ 1885ನೇ ಇಸವಿ ಜೂ್ 30ನೇ ಮಕ್ತುಮಿನಲ್ಲಿ ಮೆ|| ಬಿ. ಕೃಷ್ಣಯ್ಯಂಗಾರ್ರು ಕಡೂರು ಡಿಸ್ಟ್ರಿಕ್ಟ್ ಪೋಲೀಸ್ ಸೂ್ಪ ಕಮ್ಮಿಷನ ರ ಉದ್ಯೋಗದ ಚಾರ್ಜನ್ನು, ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ನಾಗೇಶರಾಯರಿಂದ ತೆಗದುಕೊಂಡಿರುತ್ತಾರೆ.

ಬಮೋಜೀಬ್ ಹುಕ್ಕುಂ,
ಯಸ್. ವೆಂಕಟವರದಯ್ಯಂಗಾರ್,
ಆ|| ಸೆಕ್ರಟೇರಿ.